**ಕರ್ನಾಟಕ ಸರ್ಕಾರ**

ಸಂ: ಜಲಅಇ/ತೋಜನಿ/ತಾ.ಸ/10/2009-10

ಜಲಾನಯನ ಅಭಿವೃದ್ಧಿ ಇಲಾಖೆ,
ಕೆ.ಹೆಚ್.ಬಿ.ಕಟ್ಟಡ, 8ನೇ ಮಹಡಿ, ಕೆ.ಜಿ.ರಸ್ತೆ,
ಬೆಂಗಳೂರು-9. ದಿನಾಂಕ: 18.07.2011.

:: **ಸುತ್ತೋಲೆ** :: ಹೆಚ್-4/10-11

ವಿಷಯ: ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯ ಹಾಗು ಕೃಷಿ/ತೋಟಗಾರಿಕೆ ಸಂಶೋಧನಾ ಕೇಂದ್ರಗಳಿಂದ ಒಪ್ಪಂದ ಮಾಡಿಕೊಂಡಿರುವಂತೆ ಗಿಡಗಳನ್ನು ಪಡೆಯುವ ಬಗ್ಗೆ.

ಉಲ್ಲೇಖ: 1. ಕಛೇರಿ ಆದೇಶದ ಸಂಖ್ಯೆ: ಜಲಅಇ:ತೋಜನಿ:ತಾಸ:10:2009-10, ದಿ:26.11.20010.
2. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಪತ್ರದ ಸಂಖ್ಯೆ: ಸಂನಿ: ತೋವಿವಿಬಾ: 627: 2011-12, ದಿ: 12.07.2011.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರ ಪತ್ರದಡಿ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮದಡಿ (IWMP) ತೋಟಗಾರಿಕೆ ಉಪಚಾರಗಳಿಗೆ ಅವಶ್ಯವಿರುವ ವಿವಿಧ ತೋಟಗಾರಿಕೆ ಬೆಳೆಗಳ ಕಸಿ / ಸಸಿ ಗಿಡಗಳನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ, ರಾಯಚೂರು ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ ಇವರಿಂದ ಉತ್ಪಾದಿಸಿಕೊಂಡು ಪೂರೈಸಿಕೊಳ್ಳಲು ಶೇ.50 ಅನುದಾನವನ್ನು ಮುಂಗಡವಾಗಿ ನೀಡಲು ತಿಳಿಸಲಾಗಿತ್ತು. ಇದರಂತೆ ಕಸಿ/ಸಸಿ ಗಿಡಗಳನ್ನು ಉತ್ಪಾದಿಸಿಕೊಳ್ಳಲು ಹಲವು ಜಿಲ್ಲೆಗಳಲ್ಲಿ ಮುಂಗಡ ಅನುದಾನವನ್ನು ನೀಡಲಾಗಿದೆ. ಉಲ್ಲೇಖ-2ರ ಪತ್ರದಲ್ಲಿ ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಅಧೀನ ಬರುವ ವಿವಿಧ ತೋಟಗಾರಿಕೆ ಸಂಶೋಧನಾ ಕೇಂದ್ರಗಳಲ್ಲಿ ಗಿಡಗಳು ಲಭ್ಯವಿದ್ದು, ಇವುಗಳು ನಾಟಿ ಮಾಡುವುದಕ್ಕೆ ಸೂಕ್ತವಾಗಿರುತ್ತದೆಂದು ತಿಳಿಸಿರುತ್ತಾರೆ.

ಒಪ್ಪಂದದ ಪ್ರಕಾರ ಆಯಾ ಕೇಂದ್ರಗಳಿಗೆ ಉಳಿದ ಹಣವನ್ನು ಸಂದಾಯ ಮಾಡಿ ಸಸಿಗಳನ್ನು ಕೂಡಲೇ ತೆಗೆದುಕೊಂಡು ಹೋಗಲು ತಿಳಿಸಿರುತ್ತಾರೆ ಈ ಹಿನ್ನಲೆಯಲ್ಲಿ ಈಗ ಮಳೆಗಾಲವು ಪ್ರಾರಂಭವಾಗಿದ್ದು ತೋಟಗಾರಿಕೆ ಕಸಿ/ಸಸಿ ಗಿಡಗಳನ್ನು ನೆಡಲು ಸೂಕ್ತ ಸಮಯವಾಗಿರುವುದರಿಂದ ಒಪ್ಪಂದದಂತೆ ಗಿಡಗಳನ್ನು ತೋಟಗಾರಿಕೆ ಉಪಚಾರಗಳಿಗೆ ಪೂರೈಸಿಕೊಳ್ಳಲು ಈ ಮೂಲಕ ತಿಳಿಸಿದೆ. ಒಪ್ಪಂದದ ಪ್ರಕಾರ ಒಂದು ವೇಳೆ ಸದರಿ ಸಂಶೋಧನಾ ಕೇಂದ್ರದಿಂದ ಪೂರೈಸಿಕೊಳ್ಳದೆ ಕಾರ್ಯಕ್ರಮ ಕುಂಠಿತವಾದಲ್ಲಿ ಹಾಗು ಮುಂದಿನ ಆಗುಹೋಗುಗಳಿಗೆ ನೀವೇ ನೇರ ಜವಾಬ್ದಾರಾಗಿರುತ್ತೀರಿ ಎಂದು ತಿಳಿಯುವುದು ಈ ಬಗ್ಗೆ ತೆಗೆದುಕೊಂಡ ಕ್ರಮಗಳ ವರದಿಯನ್ನು ಈ ಕಛೇರಿಗೆ ನೀಡಲು ಸೂಚಿಸಿದೆ.

ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ.

**ಗೆ:**

ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ,
ಜಲಾನಯನ ಅಭಿವೃದ್ಧಿ ಇಲಾಖೆ.
................................ ಜಿಲ್ಲೆ.

ಪ್ರತಿಯನ್ನು:
1.ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ................................ ಜಿಲ್ಲೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಸೆಕ್ಟರ್ ನಂ.60, ನವನಗರ, ಬಾಗಲಕೋಟೆ ಇವರ ಮಾಹಿತಿಗಾಗಿ ಕಳುಹಿಸಿದೆ.



**ಕರ್ನಾಟಕ ಸರ್ಕಾರ**

ಕ್ರ.ಸಂ:ಜಅಇ/ ತೋಜಂನಿ/ತಾ.ಸ./04/2010-11.

ಜಲಾನಯನ ಅಭಿವೃದ್ಧಿ ಇಲಾಖೆ,
8ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ,
ಕಾವೇರಿ ಭವನ, ಕೆಂಪೇಗೌಡರಸ್ತೆ,
ಬೆಂಗಳೂರು-09. ದಿನಾಂಕ : 13-7-2011.

:: <u>ಸುತ್ತೋಲೆ</u> ::ಹೆಚ್-3/2011-12

ವಿಷಯ: ತೋಟಗಾರಿಕೆ ಉಪಚಾರಗಳಲ್ಲಿ ಕಸಿ/ಸಸಿ ಗಿಡಗಳ ಪೂರೈಕೆಯಲ್ಲಿ ಜಿಲ್ಲಾ ತಾಂತ್ರಿಕ ಸಮಿತಿಯ ವರದಿಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಸಂಖ್ಯೆ: ಜಅಇ: ಜಂತೋನಿ: ತಾಸ: 12:2009-10, ದಿ: 24.03.2011.
2. ಸುತ್ತೋಲೆ:ಹೆಚ್-2/11-12, ಸಂ: ಜಅಇ: ಜಂತೋನಿ: ತಾಸ: 04:2010-11, ದಿನಾಂಕ: 6.7.11.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಡಿ ವಿವಿಧ ತೋಟಗಾರಿಕೆ ಕಸಿ/ಸಸಿ ಗಿಡಗಳನ್ನು ತೋಟಗಾರಿಕೆ ಉಪಚಾರಗಳಿಗೆ ಪೂರೈಸಿಕೊಳ್ಳುವ ಮುನ್ನಾ ಜಿಲ್ಲಾ ತಾಂತ್ರಿಕ ಸಮಿತಿಯು ಗಿಡಗಳ ಪೂರೈಕೆ ಬಗ್ಗೆ ನಿರ್ಣಯಿಸಿದಂತೆ ಸರ್ಕಾರೇತರ ಸಸ್ಯಗಾರಗಳಿಂದ ಗಿಡಗಳನ್ನು ಪೂರೈಸಿಕೊಳ್ಳುವ ಪೂರ್ವದಲ್ಲಿ ಗಿಡಗಳ ಗುಣಮಟ್ಟದ ಹಾಗು ವಿಶಿಷ್ಟತೆಗಳ ಬಗ್ಗೆ ಸಮಿತಿಯು ನರ್ಸರಿಗಳನ್ನು ಪ್ರತ್ಯಕ್ಷ ಭೇಟಿ ಮಾಡಿ ಇಲಾಖಾ ಮಾರ್ಗಸೂಚಿಯಲ್ಲಿ ನೀಡಿರುವ ತೋಟಗಾರಿಕೆ ಕಸಿ/ಸಸಿ (ತಳಿಗಳು) ಗಿಡಗಳ ವೈಶಿಷ್ಟತೆಗಳಗನುಗುಣವಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ದೃಢೀಕರಿಸಿ, ಉಪಚಾರಗಳಿಗೆ ಪೂರೈಸಿಕೊಳ್ಳುವುದು ಹಾಗು ಸಂಬಂಧಪಟ್ಟ ಅಧಿಕಾರಿಗಳು ಸರಬರಾಜು ಬಿಲ್ಲುಗಳಲ್ಲಿ ವಿಶಿಷ್ಟತೆಗಳ ಮತ್ತು ಜಾತಿ/ತಳಿ ವಿವರಗಳನ್ನು ದಾಖಲಿಸಿ ನಂತರ ಉಪಚಾರಗಳಿಗೆ ಪೂರೈಸಿಕೊಳ್ಳಲು ತಿಳಿಸಿರುವುದು ಸರಿಯಷ್ಟೇ. ಮುಂದುವರೆದು, ಈ ವಿಷಯವು ಗಂಭೀರವಾಗಿರುವುದರಿಂದ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಈ ಕುರಿತು ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಕಸಿ/ಸಸಿ ಗಿಡಗಳ ಗುಣಮಟ್ಟದ ಬಗ್ಗೆ ಖಾತ್ರಿಪಡಿಸಲು ಕ್ರಮವಹಿಸುವುದು. ಆದರೆ ಕೆಲವೊಂದು ಜಿಲ್ಲೆಗಳಲ್ಲಿ ಈ ಕ್ರಮಗಳನ್ನು ಅನುಸರಿಸಿಲ್ಲವೆಂದು ದೂರುಗಳು ಬಂದಿರುವ ಹಿನ್ನಲೆಯಲ್ಲಿ ಉಲ್ಲೇಖ-2ರ ಪತ್ರದಲ್ಲಿ ನಮೂದಿಸಿರುವಂತೆ ಕಸಿ/ಸಸಿಗಳ ಗುಣಮಟ್ಟ ದೃಢೀಕರಣ ಕ್ರಮಗಳನ್ನು, ತಳಿಗಳ ವ್ಯತ್ಯಾಸ ಆಗದಂತೆ ಜವಬ್ದಾರಿ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ. ಇಲ್ಲಿಯವರೆಗೆ ಯಾವ ಜಿಲ್ಲೆಯಿಂದಲೂ ಜಿಲ್ಲಾ ತಾಂತ್ರಿಕ ಸಮಿತಿಯ ಸ್ಥಳ ಪರಿಶೀಲನೆ ಮಾಡಿದ ವರದಿಯು ಈ ಕಛೇರಿಗೆ ಬಂದಿರುವುದಿಲ್ಲ. ಆದುದರಿಂದ ಕೆಳಕಂಡ ಅಂಶಗಳಿಗೆ ವರದಿಯನ್ನು ಅವಶ್ಯ ದಾಖಲಾತಿ ಹಾಗೂ ಛಾಯಾ ಚಿತ್ರ/ವಿಡಿಯೋ ಚಿತ್ರೀಕರಣಗಳೊಂದಿಗೆ ನೀಡಲು ತಿಳಿಸಿದೆ.

1. ನರ್ಸರಿ ಸ್ಥಳ ಪರಿಶೀಲನೆ ಮಾಡಿದ ದಿನಾಂಕ ಹಾಗು ಸಮಿತಿಯ ಸದಸ್ಯರುಗಳ ಹೆಸರು.
2. ನರ್ಸರಿಯಲ್ಲಿ ಲಭ್ಯವಿರುವ ಬೆಳೆ ಹಾಗು ತಳಿವಾರು ತಾಯಿ ಮರಗಳು, ಇತರೆ ಮೂಲ ಭೂತ ಸೌಕರ್ಯಗಳಾದ ಪಾಲಿಮನೆ, ನೆರಳು ಚಪ್ಪರ, ನೀರಾವರಿ ಸೌಕರ್ಯ, ತಾಂತ್ರಿಕ ಕೆಲಸಗಾರರು ಇತ್ಯಾದಿಗಳ ಬಗ್ಗೆ ವರದಿ ನೀಡುವುದು. ಒಂದು ವೇಳೆ ತಾಯಿ ಮರಗಳು ಇಲ್ಲದಿದ್ದಲ್ಲಿ ಸಸ್ಯಾಭಿವೃದ್ಧಿಗಾಗಿ ಅವಶ್ಯವಿರುವ ಸಯಾನ್ ಸಾಮಾಗ್ರಿ/ಕಸಿಗಿಡಗಳನ್ನು ಪೂರೈಸಿಕೊಳ್ಳುವ ಮೂಲಗಳು ಎಲ್ಲಿಂದ ಎಂಬುದರ ಬಗ್ಗೆ ಮಾಹಿತಿ ನೀಡುವುದು.
3. ನರ್ಸರಿಯಲ್ಲಿ ಲಭ್ಯವಿರುವ ಬೆಳೆವಾರು ಹಾಗು ತಳಿವಾರು ಕಸಿ/ಸಸಿ ಗಿಡಗಳ ಸಂಖ್ಯೆಯನ್ನು ನಮೂದಿಸುವುದು.
4. ಸಮಿತಿಯು ತಳಿಗಳ ಬಗ್ಗೆ ನಿಖರವಾಗಿ ಪರಿಶೀಲಿಸಿ ಸಂಬಂಧಿಸಿದ ತಾಂತ್ರಿಕ ಅಧಿಕಾರಿಗಳು ದೃಢೀಕರಿಸಿದ ಬಗ್ಗೆ ವರದಿ.
5. ಸಮಿತಿಯು ಇಲಾಖೆ ನಿಗದಿ ಪಡಿಸಿದ ತಾಂತ್ರಿಕ ವಿಶಿಷ್ಟತೆಗಳಂತೆ ಗಿಡಗಳು ಲಭ್ಯವಿಲ್ಲದಿದ್ದಲ್ಲಿ ತಿರಸ್ಕರಿಸಿದ ಬಗ್ಗೆ ವರದಿ ಸಲ್ಲಿಸುವುದು.

ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

ಗೆ:
ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,
ಜಲಾನಯನ ಅಭಿವೃದ್ಧಿ ಇಲಾಖೆ,
.......................................... ಜಿಲ್ಲೆ.

ಪ್ರತಿಯನ್ನು ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ,
.......................................... ಜಿಲ್ಲೆ.

ಕರ್ನಾಟಕ ಸರ್ಕಾರ

ಕ್ರ.ಸಂ:ಜಅಇ/ ತೋಜಂನಿ/ತಾ.ಸ./04/2010-11.

ಜಲಾನಯನ ಅಭಿವೃದ್ಧಿ ಇಲಾಖೆ,
8ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ,
ಕಾವೇರಿ ಭವನ, ಕೆಂಪೇಗೌಡರಸ್ತೆ,
ಬೆಂಗಳೂರು-09. ದಿನಾಂಕ : 6-7-2011.

:: ಸುತ್ತೋಲೆ ಹೆಚ್-2/11-12::

ವಿಷಯ: ತೋಟಗಾರಿಕೆ ಉಪಚಾರಗಳಲ್ಲಿ ಕಸಿ/ಸಸಿ ಗಿಡಗಳ ಪೂರೈಕೆ ಮತ್ತು ತಾಂತ್ರಿಕ ವಿಶಿಷ್ಟತೆಗಳಿಗನುಗುಣವಾಗಿ ದೃಢೀಕರಣ ಮಾಡುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಜಅಇ: ಜಂತೋನಿ: ತಾಸ: 12:2009-10, ದಿ: 24.03.2011.

ಮೇಲ್ಕಾಣಿಸಿದ ವಿಷಯದ ಬಗ್ಗೆ ತಿಳಿಸುವದೇನೆಂದರೆ, ಉಲ್ಲೇಖ ಪತ್ರದಡಿ ವಿವಿಧ ತೋಟಗಾರಿಕೆ ಕಸಿ/ಸಸಿ ಗಿಡಗಳನ್ನು ತೋಟಗಾರಿಕೆ ಉಪಚಾರಗಳಿಗೆ ಪೂರೈಸಿಕೊಳ್ಳುವ ಮುನ್ನಾ ಜಿಲ್ಲಾ ತಾಂತ್ರಿಕ ಸಮಿತಿಯು ಗಿಡಗಳ ಪೂರೈಕೆ ಬಗ್ಗೆ ನಿರ್ಣಯಿಸಿದಂತೆ ಸರ್ಕಾರೇತರ ಸಸ್ಯಗಾರಗಳಿಂದ ಗಿಡಗಳನ್ನು ಪೂರೈಸಿಕೊಳ್ಳುವ ಪೂರ್ವದಲ್ಲಿ ಗಿಡಗಳ ಗುಣಮಟ್ಟದ ಹಾಗು ವಿಶಿಷ್ಟತೆಗಳ ಬಗ್ಗೆ ಸಮಿತಿಯು ನರ್ಸರಿಗಳನ್ನು ಪ್ರತ್ಯಕ್ಷ ಭೇಟಿ ಮಾಡಿ ಇಲಾಖಾ ಮಾರ್ಗಸೂಚಿಯಲ್ಲಿ ನೀಡಿರುವ ತೋಟಗಾರಿಕೆ ಕಸಿ/ಸಸಿ (ತಳಿಗಳು) ಗಿಡಗಳು, ವೈಶಿಷ್ಟತೆಗಳಗನುಗುಣವಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ದೃಢೀಕರಿಸಿ, ಉಪಚಾರಗಳಿಗೆ ಪೂರೈಸಿಕೊಳ್ಳುವುದು ಹಾಗು ಸಂಬಂಧಪಟ್ಟ ಅಧಿಕಾರಿಗಳು ಸರಬರಾಜು ಬಿಲ್ಲುಗಳಲ್ಲಿ ವಿಶಿಷ್ಟತೆಗಳ ಮತ್ತು ಜಾತಿ/ತಳಿ ವಿವರಗಳನ್ನು ದಾಖಲಿಸಿ ನಂತರ ಉಪಚಾರಗಳಿಗೆ ಪೂರೈಸಿಕೊಳ್ಳಲು ತಿಳಿಸಲಾಗಿತ್ತು. ಆದಾಗಿಯೂ ತೋಟಗಾರಿಕೆ ಸಸಿ/ಕಸಿ ಗಿಡಗಳ ಪೂರೈಕೆಯಲ್ಲಿ ಅಳವಡಿಸಬೇಕಾದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಕೆಲವೊಂದು ಜಿಲ್ಲೆಗಳಲ್ಲಿ ಕಸಿ/ಸಸಿಗಳನ್ನು (ತಳಿಗಳು) ಗಿಡಗಳನ್ನು ಪೂರೈಸಿಕೊಳ್ಳುತ್ತಿರುದಾಗಿ ದೂರುಗಳು ನನ್ನ ಗಮನಕ್ಕೆ ಬಂದಿರುತ್ತವೆ.

ಈ ಸಂಯೋಜಿತ ವ್ಯವಸ್ಥೆಯಲ್ಲಿ ಪಾರದರ್ಶಕ ರೀತಿಯಲ್ಲಿ ರೈತರ ಬೇಡಿಕೆಗನ್ವಯವಾದಂತೆ ಮೂಲಗಳನ್ನು ಗುರುತಿಸಿಕೊಂಡು, ಇಲಾಖೆ ನಿಗದಿಪಡಿಸಿದ ವೈಶಿಷ್ಠತೆಗಳನುಸಾರ ಗುಣಮಟ್ಟದ ತೋಟಗಾರಿಕೆ ಕಸಿ/ಸಸಿ ಗಿಡಗಳನ್ನು ರೈತ ಫಲಾನುಭವಿಗಳಿಗೆ ಪೂರೈಸಿಕೊಡುವಂತಹ ಜವಾಬ್ದಾರಿಯುತ ಕ್ರಮಗಳಲ್ಲಿ ಜಿಲ್ಲೆಯ ತೋಟಗಾರಿಕೆ ಘಟಕದ ಅಧಿಕಾರಿಗಳು ತೊಡಗಿಸಿಕೊಳ್ಳುವುದು.

ರೈತರ ಬೇಡಿಕೆಗೆ ಅನುಸಾರವಾಗಿ ವಿವಿಧ ತೋಟಗಾರಿಕೆ ಬೆಳೆ ಮತ್ತು ತಳಿಗಳನ್ನು ನಿರ್ಧರಿತ ವಿಶಿಷ್ಟತೆಗಳ ಪ್ರಕಾರವೇ ಕ್ಷೇತ್ರ ಮಟ್ಟದ ತೋಟಗಾರಿಕೆ ಘಟಕಕ್ಕೆ ಸಂಬಂಧಿಸಿದ ಅಧಿಕಾರಿಗಳ ದೃಢೀಕರಣದ ಮೇರೆಗೆ ಅನುಷ್ಠಾನಗೊಳಿಸುವುದು. ಬೆಳೆ/ತಳಿ ಹಾಗು ಗುಣಮಟ್ಟದಲ್ಲಿ ವ್ಯತ್ಯಾಸ ಕಂಡು ಬಂದರೆ ಸಹಾಯಕ ತೋಟಗಾರಿಕೆ ಅಧಿಕಾರಿ ಹಾಗು ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರುಗಳೇ ನೇರವಾಗಿ ಹೊಣೆಗಾರರಾಗಿರುತ್ತಾರೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಿದೆ. ಸಸಿ/ಕಸಿ ಗಿಡಗಳ ಗುಣಮಟ್ಟ ಕಾಪಾಡುವಲ್ಲಿನ ಕರ್ತವ್ಯ ನಿರ್ಲಕ್ಷತೆ, ನೇರ ಪಾಲುಗೊಳ್ಳುವಿಕೆ ಇಲ್ಲದಿರುವುದನ್ನು ಗಮನಿಸಲಾಗಿದೆ. ಇಂತಹ ಕರ್ತವ್ಯಲೋಪವೆಸಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಶಿಸ್ತು ಕ್ರಮಗಳಿಗೆ ಗುರಿಪಡಿಸಲಾಗುವುದು. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಈ ಕುರಿತು ಉಸ್ತುವಾರಿ ಮತ್ತು ಮೇಲ್ವಿಚಾರಣೆ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಲು ತಿಳಿಸಿದೆ. ಪೂರೈಸಿಕೊಂಡ ಕಸಿ/ಸಸಿ ಗಿಡಗಳ ಬೆಳೆ/ತಳಿಯ ಛಾಯ ಚಿತ್ರಗಳನ್ನು ತೆಗೆದು ವಿವರಗಳೊಂದಿಗೆ ದಾಖಲಿಸುವುದು.

ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

ಗೆ:
ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,
ಜಲಾನಯನ ಅಭಿವೃದ್ಧಿ ಇಲಾಖೆ,
............................................ ಜಿಲ್ಲೆ.

ಪ್ರತಿಯನ್ನು ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ,
............................................ ಜಿಲ್ಲೆ.



ಕರ್ನಾಟಕ ಸರ್ಕಾರ

ಸಂಖ್ಯೆ: ಜಅಇ/ತೋಜನಿ/ತೋಉನಿ/2/2010-11

ಆಯುಕ್ತರ ಕಛೇರಿ.
ಜಲಾನಯನ ಅಭಿವೃದ್ಧಿ ಇಲಾಖೆ,
8 ನೇ ಮಹಡಿ, ಕೆ.ಹೆಚ್.ಬಿ.ಕಾಂಪ್ಲೆಕ್ಸ್,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-9, ದಿನಾಂಕ 18.4.2011.

:: ಸುತ್ತೋಲೆ :: ಹೆಚ್-1/11-12.

ವಿಷಯ: 2011-12ನೇ ಸಾಲಿನಲ್ಲಿ ತೆಂಗು ಬೀಜ ಸಂಗ್ರಹಣೆ, ನರ್ಸರಿ ನಿರ್ವಹಣೆ ಹಾಗು ಕಸಿ ಗಿಡಗಳ ಸಸ್ಯಾಭಿವೃದ್ಧಿ ಮಾರ್ಗಸೂಚಿಗಳನ್ನು ನೀಡುತ್ತಿರುವ ಕುರಿತು.

----

## I. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಮಾರ್ಗಸೂಚಿ:

ತೆಂಗು ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುಗುಣವಾಗುವಂತೆ ಉತ್ಕೃಷ್ಟ ಗುಣಮಟ್ಟದ ತೆಂಗಿನ ಸಸಿಗಳನ್ನು ಉತ್ಪಾದನೆ ಮಾಡುವ ಕಾರ್ಯಕ್ರಮವನ್ನು **IWMP** ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಬಿತ್ತನೆ ತೆಂಗಿನ ಕಾಯಿಗಳನ್ನು ಸಂಗ್ರಹಣೆ ಮಾಡುವಂತಹ ತೆಂಗಿನ ತೋಟಗಳಲ್ಲಿ ಗುಣಮಟ್ಟವನ್ನು ಕಾಪಾಡುವಂತಹ ಎಲ್ಲಾ ಎಚ್ಚರಿಕೆ ಮತ್ತು ಸೂಕ್ತ ಮೇಲ್ವಿಚಾರಣೆ ಅತ್ಯಾವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಹಾಗೂ ಮೇಲ್ವಿಚಾರಣೆ ಜವಾಬ್ದಾರಿಯನ್ನು ಕೈಗೊಳ್ಳಬೇಕಾಗಿದೆ. ಉತ್ತಮ ತೆಂಗಿನ ಸಸಿಗಳನ್ನು ಉತ್ಪಾದಿಸಲು ಈ ಕೆಳಕಂಡ ಸೂಚನೆಗಳನ್ನು ಅತಿಮುಖ್ಯವಾಗಿ ಪಾಲಿಸತಕ್ಕದ್ದು.

1. ತೆಂಗು ಬೀಜ ಸಂಗ್ರಹಣೆಗಾಗಿ ತಾಯಿ ಮರಗಳನ್ನು ಆಯ್ಕೆ ಮಾಡಲು ಪಾಲಿಸಬೇಕಾದ ಅಂಶಗಳು:

a) ತೋಟಗಾರಿಕೆ ಇಲಾಖಾವತಿಯಿಂದ ಗುರುತಿಸಿರುವ ರೈತರ ಪಟ್ಟಿಯನ್ನು ಪಡೆಯುವುದು ಹಾಗು ಗುರುತಿಸಿರುವ ರೈತರ ತೋಟಗಳಿಂದ ಮಾತ್ರ ಬಿತ್ತನೆ ತೆಂಗಿನ ಕಾಯಿಗಳನ್ನು ಪಡೆಯುವುದು.

b) **20-40** ವರ್ಷ ವಯಸ್ಸಿನ ಉತ್ಕೃಷ್ಟ ಗುಣ ಮಟ್ಟದ ತಾಯಿ ಮರಗಳಿಂದ ಮಾತ್ರ ಗೋಲಾಕಾರದ ಮಧ್ಯಮ ಗಾತ್ರದ ಬೀಜದ ತೆಂಗಿನ ಕಾಯಿಗಳನ್ನು ಸಂಗ್ರಹಿಸುವುದು.

c) ತಾಯಿ ಮರಗಳು ಪೂರ್ಣ ಉತ್ಪಾದನೆ ನೀಡುವ ಹಂತವನ್ನು (**Full bearing stage**) ತಲುಪಿದ್ದು, ಕನಿಷ್ಠ 4 ವರ್ಷಗಳಲ್ಲಿ ಸತತವಾಗಿ ಹೆಚ್ಚು ಇಳುವರಿಯನ್ನು ನೀಡುತ್ತಿರಬೇಕು (80-100 ಕಾಯಿಗಳು/ ಪ್ರತಿ ಗಿಡಕ್ಕೆ).

d) **Seed Garden** ಗಳಲ್ಲಿ ಹೆಚ್ಚು ಉತ್ಪಾದನೆ ನೀಡುವಂತಹ ಗಿಡಗಳು ಮಾತ್ರ ಇರುವುದರಿಂದ ಅವುಗಳ ತಾಯಿ ಗಿಡಗಳ ಗುಣಗಳು ತಿಳಿದಿರುತ್ತದೆ.

e) ತಾಯಿ ಮರವು ಕನಿಷ್ಠ 30 ಸಂಖ್ಯೆ ಪೂರ್ಣವಾಗಿ ತೆರೆದ ಗರಿಗಳನ್ನು ಹೊಂದಿರತಕ್ಕದ್ದು.

f) ಗರಿಗಳು ಗಿಡ್ಡ ಹಾಗೂ ಸದೃಢವಾದ ಎಲೆ ತೊಟ್ಟುಗಳನ್ನು ಹೊಂದಿದ್ದು, ಮರದ ಕಾಂಡಕ್ಕೆ ಗಟ್ಟಿಯಾಗಿ ಹೊಂದಿಕೊಂಡಿರತಕ್ಕದ್ದು.

g) ಮರದ ಸುಳಿಯಲ್ಲಿ ಗರಿಗಳು ಛತ್ರಿ ಆಕಾರದಲ್ಲಿ ಇರತಕ್ಕದ್ದು (**Umbrella shaped**).

h) ತಾಯಿ ಮರಗಳು ರೋಗ ಹಾಗೂ ಕೀಟ ಮುಕ್ತವಾಗಿರಬೇಕು.

i) ಬಿತ್ತನೆಕಾಯಿಗಳನ್ನು ಸಂಗ್ರಹಣೆ ಮಾಡಲಾದ ತಾಯಿ ಮರಗಳನ್ನು ಕ್ರಮವಾಗಿ ಸಂಖ್ಯೆಗಳನ್ನು ನೀಡಿ ಗುರುತಿಸಿರಬೇಕು.

j) ಬಿತ್ತನೆ ತೆಂಗಿನ ಕಾಯಿಗಳನ್ನು ಅಕ್ಟೋಬರ್‌ನಿಂದ ಫೆಬ್ರುವರಿವರೆಗಿನ ಅವಧಿಯಲ್ಲಿ ತಾಯಿಮರಗಳಿಂದ ಸಂಗ್ರಹಿಸಿ ನರ್ಸರಿಯಲ್ಲಿ ನಾಟಿ ಮಾಡತಕ್ಕದ್ದು.

k) ದೃಢೀಕರಿಸಿದ ತಾಯಿ ಮರಗಳಿಂದಲೇ ಪ್ರಸಕ್ತ ಸಾಲಿನಲ್ಲಿ ಬೀಜದ ತೆಂಗಿನ ಕಾಯಿಗಳನ್ನು ಸಂಗ್ರಹಿಸುವುದು. ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು ಮೇಲೆ ನೀಡಿರುವ ವಿವರಗಳನ್ನು ಅನುಸರಿಸಿ ತಾಯಿ ಮರಗಳನ್ನು ಗುರುತಿಸುವ ಕಾರ್ಯಕ್ರಮವನ್ನು ಕೈಗೊಳ್ಳತಕ್ಕದ್ದು.

l) ಮೇಲ್ಕಂಡ ಎಲ್ಲಾ ಅಂಶಗಳನ್ನು ಪಾಲಿಸಿ, ದೃಢೀಕರಿಸಿದ ತೋಟದ, ಪ್ರತಿ ತಾಯಿ ಮರದಿಂದ ದೊರೆಯುವಂತಹ ಉತ್ತಮ ಗುಣಮಟ್ಟದ ತೆಂಗಿನ ಕಾಯಿಗಳನ್ನು ಆಯ್ಕೆ ಮಾಡಿ "ತಾಯಿಮರ ವಹಿ" (**Mother Palm Register**) ನಲ್ಲಿ ದಾಖಲೆ ಮಾಡುವುದು.

m) ದಾಸ್ತಾನು ಮಾಡಿದಂತಹ ಸ್ಥಳ ಮತ್ತು ಶೇಖರಿಸಿದ ಕಾಯಿಗಳ ರಕ್ಷಣೆ ಬಗ್ಗೆ ಸ್ಪಷ್ಟ ಜವಾಬ್ದಾರಿಯನ್ನು ತೋಟಗಾರಿಕೆ ಘಟಕದ ಸಿಬ್ಬಂದಿಯವರಿಗೆ ವಹಿಸುವುದು.

n) ಪ್ರತಿ ಉಗ್ರಾಣವಾರು ಶೇಖರಿಸಿದಂತಹ ಬಿತ್ತನೆ ತೆಂಗಿನ ಕಾಯಿಗಳ ಗುಣಮಟ್ಟ, ಸಂಖ್ಯೆ ಹಾಗು ದರಗಳ ಬಗ್ಗೆ ಮೇಲ್ವಿಚಾರಣೆ ಮತ್ತು ದೃಢೀಕರಣ ಮಾಡುವಂತಹ ವ್ಯವಸ್ಥೆ ರೂಪಿಸುವುದು. ಉಗ್ರಾಣದಲ್ಲಿ ಕಡ್ಡಾಯವಾಗಿ ಲಾಗ್ ಪುಸ್ತಕಗಳನ್ನು ನಿರ್ವಹಿಸುವುದು. ತನಿಖಾಧಿಕಾರಿಗಳು ಇದನ್ನು ತನಿಖೆ ಸಮಯದಲ್ಲಿ ಪರಿಶೀಲಿಸಿ ದೃಢೀಕರಿಸಬೇಕು.

o) ಬೀಜ ಸಂಗ್ರಹಣೆ ಸಮಯದಲ್ಲಿ ಬೀಜ ಕಾಯಿ ಪಡೆದು ಕೊಳ್ಳುವ ಬಗ್ಗೆ ನುರಿತ ಅನುಭವಿ ಹಾಗು ದಕ್ಷ ಸಿಬ್ಬಂದಿಯನ್ನು ಸಂಗ್ರಹಣಾ ಕೇಂದ್ರಕ್ಕೆ ಕಳುಹಿಸಿ, ಒಳ್ಳೆಯ ಗುಣಮಟ್ಟದ ಬೀಜದ ಕಾಯಿಗಳನ್ನು ಆಯ್ಕೆ ಮಾಡುವುದರ ಜೊತೆಗೆ ನಿಗದಿತ ಸಮಯದಲ್ಲಿ ಬಿತ್ತನೆ ಕಾರ್ಯ ನಿರ್ವಹಿಸುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

p) ಬೀಜದ ತೆಂಗಿನ ಕಾಯಿಗಳನ್ನು ಸಂಗ್ರಹಿಸಿರುವ ಸ್ಥಳದ ಸಂಪೂರ್ಣ ವಿಳಾಸದ ವಿವರಗಳನ್ನು ಆಯುಕ್ತಾಲಯಕ್ಕೆ ನೀಡತಕ್ಕದ್ದು. ಜಿಲ್ಲೆಯಲ್ಲಿ ಸಂಗ್ರಹಿಸಿದ ಬೀಜದ ತೆಂಗಿನ ಕಾಯಿಗಳನ್ನು ಪರಿಶೀಲಿಸಲು ಆಯಾ ಜಿಲ್ಲೆಯ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಹಿರಿಯ/ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗು ತೋಟಗಾರಿಕೆ ಇಲಾಖೆಯ ತಾಲ್ಲೂಕು ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರೊಳಗೊಂಡಂತೆ ತಂಡವನ್ನು ರಚಿಸಿ ಸಂಗ್ರಹಿಸಿದ ಬೀಜ ತೆಂಗಿನಕಾಯಿಗಳನ್ನು ಪರಿಶೀಲಿಸಿ ದೃಢೀಕರಿಸಿ ನಂತರ ಬೀಜದ ತೆಂಗಿನ ಕಾಯಿಗಳನ್ನು ನಿಗದಿತ ಕ್ಷೇತ್ರದ ಜವಾಬ್ದಾರಿಯುತ ಅಧಿಕಾರಿ / ನೌಕರರು ಗೊತ್ತುಪಡಿಸಿದ ನರ್ಸರಿಯಲ್ಲಿ ನಾಟಿ ಮಾಡುವುದು.

q) ಪ್ರತಿ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರಗಳನ್ನುನಿಗದಿತ ನಮೂನೆಯಲ್ಲಿ ತಪ್ಪದೇ ಆಯುಕ್ತಾಲಯಕ್ಕೆ ರವಾನಿಸುವ ಕ್ರಮ ಕೈಗೊಳ್ಳುವುದು. (ಅನುಬಂಧ-1 ರಲ್ಲಿ ಲಗತ್ತಿಸಿದೆ) ಸಂಗ್ರಹಿಸಿದ ತೆಂಗಿನ ಬೀಜಗಳ ಬಿತ್ತನೆ ಕಾರ್ಯಕ್ಕಾಗಿ ಹಾಗೂ ಸಸಿಗಳ ನಿರ್ವಹಣೆಗಾಗಿ ಇಲಾಖೆಯ ದರ (ಷೆಡ್ಯೂಲ್ ಆಫ್ ರೇಟ್ಸ್‌ನ್ನು) ಪಾಲಿಸುವುದು. (ಸಂಖ್ಯೆ: ಜಅಇ /ತೋಜನಿ /ತಾ /12 /2009-10, ದಿ:24.3.2011).

r) ತೆಂಗಿನ ಬಿತ್ತನೆ ಕಾಯಿಗಳ ಪೂರೈಕೆಗೆ ಹಾಗೂ ನಾಟಿ ಮಾಡಲು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿರವರಿಂದ ಹಣ ಬಿಡುಗಡೆ ಮಾಡಿಕೊಂಡು ಸಕಾಲದಲ್ಲಿ ಕ್ರಮ ವಹಿಸುವುದು. ಜಿಲ್ಲೆಯ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿರವರು ಕಾರ್ಯಕ್ರಮದ ಗುರಿಯ ಪ್ರಕಾರ ನಿಗದಿತ ಸಮಯದಲ್ಲಿ ಬೀಜ ಆಯ್ಕೆ, ಸಂಗ್ರಹಣೆ, ಬಿತ್ತನೆ ಹಾಗೂ ಸಮಗ್ರ ನಿರ್ವಹಣೆ ಕಾರ್ಯಗಳನ್ನು ಸಮಂಜಸ ರೀತಿಯಲ್ಲಿ ಮೇಲ್ವಿಚಾರಣೆ ವಹಿಸುವುದು. ಬಿತ್ತನೆ ಬೀಜ ಸಂಗ್ರಹಣೆಯಲ್ಲಿ ತೆಂಗಿನಕಾಯಿ ವಹಿವಾಟು ನಡೆಸುವ ಪ್ರಮುಖ **A.P.M.C.** ಪ್ರಸ್ತುತ ಮಾರುಕಟ್ಟೆ ದರಕ್ಕೆ ಶೇ.10 ರಷ್ಟನ್ನು ಸೇರಿಸಿ ಸಂಬಂಧಪಟ್ಟ ರೈತರಿಗೆ / ಇಲಾಖೆಗೆ ಪಾವತಿಸುವುದು.

s) ಉತ್ತಮ ಗುಣಮಟ್ಟದ ಸಸಿಗಳು ಶೇ. 65ಕ್ಕಿಂತ ಕಡಿಮೆ ಬಂದಲ್ಲಿ ಸಂಬಂಧಪಟ್ಟ ಹಿರಿಯ / ಸಹಾಯಕ ತೋಟಗಾರಿಕೆ ನಿರ್ದೇಶಕರುಗಳು ಹಾಗೂ ತೋಟಗಾರಿಕೆ ಘಟಕದ ಅಧಿಕಾರಿ / ಸಿಬ್ಬಂದಿಗಳು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಶೇಕಡಾವಾರು (65) ಕಡಿಮೆ ಬಂದಲ್ಲಿ ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರಿಂದ ಶೇ.50, ಇನ್ನೀತರ ತೋಟಗಾರಿಕೆ ಘಟಕ ಅಧಿಕಾರಿ/ಸಿಬ್ಬಂದಿ ವರ್ಗವರಿಂದ ಶೇ.50ರಷ್ಟು ಹಣವನ್ನು ವಸೂಲಾತಿ ಮಾಡಿ ಸರ್ಕಾರಕ್ಕೆ ಜಮಾ ಮಾಡುವ ಅಧಿಕಾರ ಮತ್ತು ಸಂಪೂರ್ಣ ಜವಾಬ್ದಾರಿ ಆಯಾ ಜಿಲ್ಲೆಯ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳದಾಗಿರುತ್ತದೆ.

t) ಆಯಾ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳಿಗೆ ಅವಶ್ಯವಿರುವ ಗಿಡಗಳನ್ನು ಮಾತ್ರ ವೃದ್ಧಿಸುವುದು ಹಾಗು ಪೂರ್ಣ ಪ್ರಮಾಣದಲ್ಲಿ ಗಿಡಗಳನ್ನು ಉಪಚಾರಗಳಿಗೆ ಬಳಸುವುದು. ಗಿಡಗಳನ್ನು ಉಪಚಾರಗಳಿಗೆ ಬಳಸದೇ ನರ್ಸರಿಯಲ್ಲಿ ಉಳಿಸಿಕೊಂಡಲ್ಲಿ ನಿರ್ವಹಣಾ ವೆಚ್ಚವನ್ನು ಇಲಾಖಾವತಿಯಿಂದ ಭರಿಸಲಾಗುವುದಿಲ್ಲ. ಮತ್ತು ಉತ್ಪಾದಿಸಿದ ಸಸಿಗಳನ್ನು ಇಲಾಖೆ ಕಾರ್ಯಕ್ರಮಗಳಿಗೆ ಪೂರೈಸಿಕೊಳ್ಳುವುದು ಸಂಬಂಧಿಸಿದ ಹಿರಿಯ/ಸಹಾಯಕ ತೋಟಗಾರಿಕೆ ಅಧಿಕಾರಿರವರ ಜವಬ್ಧಾರಿಯಾಗಿರುತ್ತದೆ.

u) ಇಲಾಖೆ ನಿಯೋಜಿಸಿದ ಅಧಿಕಾರಿಗಳು,ತೆಂಗಿನ ಸಸಿಗಳ ಗುಣಮಟ್ಟದ ಬಗ್ಗೆ ದೃಢೀಕರಿಸಿದ ಮೇಲೆ ವಿತರಣೆ ಮಾಡುವುದು.

v) ತೆಂಗಿನ ಸಸ್ಯೋತ್ಪಾದನೆ ಸಂಬಂಧಿಸಿದಂತೆ, ಗುರಿಗಳ ಬಗ್ಗೆ ಸ್ಪಷ್ಟತೆ ಇರಬೇಕು.

w) ಇಲಾಖೆ ನಿಗದಿಪಡಿಸಿರುವ ಸಸ್ಯಾಭಿವೃದ್ಧಿ ವೆಚ್ಚ ಮೀರದಂತೆ ವ್ಯಯ ಭರಿಸುವುದು. ಯಾವುದೇ ವಿವಾದಗಳು ಉದ್ಭವಿಸಿದಲ್ಲಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬಗೆಹರಿಸಿಕೊಳ್ಳುವುದು

x) ಗಿಡಗಳನ್ನು ಕಡ್ಡಾಯವಾಗಿ ನರ್ಸರಿಗಳಲ್ಲೆ ವೃದ್ಧಿಸುವುದು. ಹೊರಗಿನಿಂದ ತಂದು ಶೇಖರಿಸಿ ತಪ್ಪು ಮಾಹಿತಿ ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುವುದು

**II.** ತೆಂಗು ಸಸ್ಯೋತ್ಪಾದನೆಯಲ್ಲಿ ನಿರ್ವಹಿಸಬೇಕಾದ ವಹಿಗಳ ವಿವರಗಳು:

1. ತಾಯಿ ಮರ ವಹಿ (**Mother Palm Register**):
2. ಲಾಗ್ ಪುಸ್ತಕ:
3. ಕೇಂದ್ರ ದಾಸ್ತಾನು ಪುಸ್ತಕ:
4. ಸಸ್ಯಾಭಿವೃದ್ಧಿ ವಹಿ:
5. ವಿತರಣಾ ವಹಿ:
6. ಡೆಡ್‌ಸ್ಟಾಕ್ ವಹಿ:
7. ಗುತ್ತಿಗೆ ಕೆಲಸಗಳ ವಹಿ:
8. ವಾಚ್ ಅಂಡ್ ವಾರ್ಡ್ ರಿಜಿಸ್ಟರ್.
9. ಅಧಿಕಾರಿಗಳ ಭೇಟಿ ಮತ್ತು ಸಲಹಾ ರಿಜಿಸ್ಟರ್.
10. ಸ್ವತ್ತು ವಹಿ (**Property Register**).
11. **DMR:**
12. ಇತರೆ ವಹಿಗಳು:

ಅನುಬಂಧ-1

**III. 2011-12ನೇ ಸಾಲಿನಲ್ಲಿ IWMP ಕಾರ್ಯಕ್ರಮದಡಿ ಬೀಜದ ತೆಂಗು ಸಂಗ್ರಹಣೆ ಹಾಗು ನರ್ಸರಿ ನಿರ್ವಹಣೆ ಪ್ರಗತಿ ವರದಿ.**

| ಕ್ರ. ಸ. | ತೋ.ಇ. ಗುರುತಿಸಿರುವಂತೆ ಆಯ್ಕೆ ಮಾಡಿದ ತೋಟದ ಮಾಲೀಕರ ಹೆಸರು ಸರ್ವೇ ನಂ.ವಿಳಾಸ. | ಆಯ್ಕೆ ಮಾಡಿದ ಮರಗಳ ಸಂಖ್ಯೆ | ಆಯ್ಕೆ ಮಾಡಿದ ಬೀಜದ ಕಾಯಿಗಳ ಸಂಖ್ಯೆ | ಆಯ್ಕೆ ಮಾಡಿದ ದಿನಾಂಕ | ಶೇಖರಣೆ ಮಾಡಿದ ಕ್ಷೇತ್ರ ಉಗ್ರಾಣ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |

ಹಿರಿಯ / ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ,
........................................ ಜಿಲ್ಲೆ.

ದಿನಾಂಕ:

**IV. ಕಸಿ/ಸಸಿ ಗಿಡಗಳ ಸಸ್ಯಾಭಿವೃದಿ ಹಾಗು ನರ್ಸರಿ ನಿರ್ವಹಣೆ :**

1. ನರ್ಸರಿಗಳಲ್ಲಿ ಸಸ್ಯಾಭಿವೃದ್ಧಿ ಕೈಗೊಳ್ಳುವ ಮೊದಲು ಗುರಿಗಳ ಬಗ್ಗೆ ಸ್ಪಷ್ಟತೆ ಇರಬೇಕು.
2. ತಳಿಗಳ ಬಗ್ಗೆ ಖಾತ್ರಿಪಡಿಸಿಕೊಂಡು ತಳಿಗಳ ವ್ಯತ್ಯಾಸ ಆಗದಂತೆ ಕ್ರಮವಹಿಸಿ ಇಲಾಖೆ ಮಾರ್ಗಸೂಚಿಯಲ್ಲಿ ನಮೂದಿಸಿರುವ ವಿಶಿಷ್ಠತೆಗಳಿಗನುಸಾರವಾಗಿ ಕಸಿ / ಸಸಿಗಳನ್ನು ವೃದ್ಧಿಸುವುದು. (ಜಅಇ. ಜಂತೋನಿ: ತಾ: 12: 2009-10, ದಿ: 24.3.2011.)
3. ಇಲಾಖೆ ನಿಗದಿಪಡಿಸಿರುವ ಸಸ್ಯಾಭಿವೃದ್ಧಿ ವೆಚ್ಚ ಮೀರದಂತೆ ವೆಚ್ಚ ಭರಿಸುವುದು.
4. ಆಯಾ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳಿಗೆ ಅವಶ್ಯವಿರುವ ಗಿಡಗಳನ್ನು ಮಾತ್ರ ವೃದ್ಧಿಸುವುದು ಹಾಗು ಪೂರ್ಣ ಪ್ರಮಾಣದಲ್ಲಿ ಗಿಡಗಳನ್ನು ಉಪಚಾರಗಳಿಗೆ ಬಳಸುವುದು. ಗಿಡಗಳನ್ನು ಉಪಚಾರಗಳಿಗೆ ಬಳಸದೇ ನರ್ಸರಿಯಲ್ಲಿ ಉಳಿಸಿಕೊಂಡಲ್ಲಿ ನಿರ್ವಹಣಾ ವೆಚ್ಚವನ್ನು ಇಲಾಖಾವತಿಯಿಂದ ಭರಿಸಲಾಗುವುದಿಲ್ಲ. ಮತ್ತು ಉತ್ಪಾಧಿಸಿದ ಕಸಿ/ಸಸಿಗಳನ್ನು ಉಪಚಾರಗಳಿಗೆ ಪೂರೈಸಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಸಂಬಂಧಿಸಿದ ಹಿರಿಯ/ಸಹಾಯಕ ತೋಟಗಾರಿಕೆ ಅಧಿಕಾರಿಗಳದಾಗಿರುತ್ತದೆ.
5. ಕಾಲಕಾಲಕ್ಕೆ ನಿರ್ವಹಿಸುವ ಕೆಲಸ ಕಾರ್ಯಗಳನ್ನು ನಿಗದಿತ ವಹಿಗಳಲ್ಲಿ ನಮೂದಿಸುವುದು.
6. ಯಾವುದೇ ವಿವಾದಗಳು ಉದ್ಭವಿಸಿದಲ್ಲಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬಗೆಹರಿಸಿಕೊಳ್ಳುವುದು.
7. ವಿವಿಧ ಬೆಳೆಗಳ ತಳಿಗಳನ್ನು ಬಣ್ಣದ ಸಂಕೇತಗಳನ್ನು ಬಳಸಿ, ವಿಂಗಡಿಸಿ ಓರಣವಾಗಿ ಜೋಡಿಸುವುದು.
8. ಯಾವುದೇ ಕಾರಣಕ್ಕೂ ಖಾಸಗಿಯಾಗಿ ಮಾರಾಟ ಮಾಡದೆ ಇಲಾಖೆ ಉಪಚಾರಗಳಿಗೆ ಪೂರೈಸಿಕೊಳ್ಳುವುದು.
9. ಕಸಿ ಗಿಡಗಳನ್ನು ಕಡ್ಡಾಯವಾಗಿ ನರ್ಸರಿಗಳಲ್ಲೆ ವೃದ್ಧಿಸುವುದು. ಹೊರಗಿನಿಂದ ತಂದು ಶೇಖರಿಸಿ ತಪ್ಪು ಮಾಹಿತಿ ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುವುದು
10. ಆಯಾ ಬೆಳೆಗೆ ನಿಗದಿಪಡಿಸಿದ ಶೇಕಡಾವಾರು ಪ್ರಮಾಣದಂತೆ ಸಸ್ಯಾಭಿವೃದ್ಧಿ ಮಾಡುವುದು, ಕಡಿಮೆ ವೃದ್ದಿಸಿದ್ದಲ್ಲಿ ಸಂಬಂಧಪಟ್ಟ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರುರವರಿಂದ ಶೇಕಡಾ 50 ರಷ್ಟು ವೆಚ್ಚವನ್ನು ಇನ್ನಿತರ ತೋಟಗಾರಿಕೆ ಘಟಕದ ಅಧಿಕಾರಿ/ಸಿಬ್ಬಂದಿಯವರಿಂದ ಶೇಕಡಾ 50ರಷ್ಟು ವೆಚ್ಚವನ್ನು ವಸೂಲು ಮಾಡಿ ಸರ್ಕಾರಕ್ಕೆ ಜಮಾ ಮಾಡುವ ಅಧಿಕಾರ ಮತ್ತು ಸಂಪೂರ್ಣ ಜವಾಬ್ದಾರಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳದಾಗಿರುತ್ತದೆ.
11. ಪ್ರತಿ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರಗಳನ್ನು ನಿಗದಿತ ನಮೂನೆಯಲ್ಲಿ (ಅನುಬಂಧ-2) ತಪ್ಪದೇ ಆಯುಕ್ತಾಲಯಕ್ಕೆ ರವಾನಿಸುವ ಕ್ರಮ ಕೈಗೊಳ್ಳುವುದು.
12. ಜಿಲ್ಲೆಯ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿರವರು ಕಾರ್ಯಕ್ರಮದ ಗುರಿಯ ಪ್ರಕಾರ ನಿಗದಿತ ಸಮಯದಲ್ಲಿ ಅನುದಾನ ಬಿಡುಗಡೆ ಮಾಡುವುದು.
13. ಇಲಾಖೆ ನಿಯೋಜಿಸಿದ ಅಧಿಕಾರಿಗಳು, ಕಸಿ/ ಸಸಿಗಳ ಗುಣಮಟ್ಟದ ಬಗ್ಗೆ ದೃಢೀಕರಿಸಿದ ಮೇಲೆ ವಿತರಣೆ ಮಾಡುವುದು.

14. ಸಸ್ಯೋತ್ಪಾದನೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕಾರ್ಯಗಳನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸುವುದು.

## v. ವಿವಿಧ ಬೆಳೆಗಳ ಶೇಕಡವಾರು ಸಸ್ಯೋತ್ಪಾದನೆ ಪ್ರಮಾಣ.

| ಕ್ರ. ಸಂ. | ಬೆಳೆ/ತಳಿಗಳು | ಪ್ರಮಾಣ. (ಶೇಕಡ) (100 ಸಸಿಗಳನ್ನು ಕಸಿ ಕಟ್ಟಿದಾಗ ಉತ್ಪಾದಿಸಬೇಕಾದ ಕಸಿಗಳ ಸಂಖ್ಯೆ) | |
|---|---|---|---|
| 1. | ಮಾವು – ಇತರ ತಳಿಗಳು | 72 | |
| 2. | ಮಾವು – ಬಾದಾಮಿ, ದಶೇರಿ, ಕೇಸರ್, ಅಮ್ರಪಾಲಿ | 63 | |
| 3. | ಸಪೋಟ | 72 | |
| 4. | ಸೀಬೆ | 72 | |
| 5. | ಹಲಸು | 50 | |
| 6. | ಸೀತಾಫಲ | 72 | |
| 7. | ಗೋಡಂಬಿ | 66 | |
| 8. | ಬೆಟ್ಟದ ನೆಲ್ಲಿ | 72 | |
| 9. | ಜಂಬು ನೇರಳೆ / ಪನ್ನೀರೆಳೆ | 72 | |
| 10. | ದಾಳಿಂಬೆ | 80 | |
| 11. | ಹುಣಸೆ | 59 | |
| 12. | ತೆಂಗು | 65 | |
| 13. | ನುಗ್ಗೆ | 100 | 100 ಸಸಿಗಳನ್ನು ವೃದ್ಧಿಸಿದಾಗ ಶೇ.100ರ success rate ಪಡೆಯುವುದು. |
| 14. | ಕರಿಬೇವು | 100 | |
| 15. | ನಿಂಬೆ | 100 | |

## VI. ಸಸ್ಯೋತ್ಪಾದನೆಯಲ್ಲಿ ನಿರ್ವಹಿಸಬೇಕಾದ ವಹಿಗಳ ವಿವರಗಳು:

| ಕ್ರ.ಸಂ. | ವಹಿಯ ಹೆಸರು |
|---|---|
| 1. | ತಾಯಿ ಮರ ವಹಿ (**Mother tree register**): |
| 2. | ಲಾಗ್ ಪುಸ್ತಕ: |
| 3. | ಕೇಂದ್ರ ದಾಸ್ತಾನು ಪುಸ್ತಕ: |
| 4. | ಸಸ್ಯಾಭಿವೃದ್ಧಿ ವಹಿ: |
| 5. | ವಿತರಣಾ ವಹಿ: |
| 6. | ಡೆಡ್‌ಸ್ಟಾಕ್ ವಹಿ: |
| 7. | ಗುತ್ತಿಗೆ ಕೆಲಸಗಳ ವಹಿ: |
| 8. | ವಾಚ್ ಅಂಡ್ ವಾರ್ಡ್ ರಿಜಿಸ್ಟರ್. |
| 9. | ಅಧಿಕಾರಿಗಳ ಭೇಟಿ ಮತ್ತು ಸಲಹಾ ರಿಜಿಸ್ಟರ್. |
| 10. | ಸ್ವತ್ತು ವಹಿ (**Property Register**). |
| 11. | **DMR:** |
| 12. | ಇತರೆ ವಹಿಗಳು: |

ಅನುಬಂಧ–2

## VII. ಸಸ್ಯಾಭಿವೃದ್ಧಿ ಪ್ರಗತಿ ವಿವರಗಳು:

**ಕ್ಷೇತ್ರದ ಹೆಸರು:**
**ತಾಲ್ಲೂಕು:**
**ಜಿಲ್ಲೆ:**
**ಯೋಜನೆ ಹೆಸರು: IWMP/ Others**

ಭೌತಿಕ ಸಂಖ್ಯೆಗಳಲ್ಲಿ: ಆರ್ಥಿಕ ರೂ. ಲಕ್ಷಗಳಲ್ಲಿ

| ಕ್ರ. ಸಂ | ಬೆಳೆ ಹೆಸರು | ತಳಿಯ ಹೆಸರು | ವಾರ್ಷಿಕ ಗುರಿ | | ಪ್ರಸ್ತುತ ಮಾಹೆಯ ಸಾಧನೆ | | ಒಟ್ಟು ಸಾಧನೆ | | ಷರಾ |
|---|---|---|---|---|---|---|---|---|---|
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| | | | | | | | | | |

ಕ್ಷೇತ್ರದ ಅಧಿಕಾರಿಗಳ ಸಹಿ:

ಹಿರಿಯ / ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ,
.......................................... ಜಿಲ್ಲೆ.

ನಿರ್ದೇಶಕರು.
ಜಲಾನಯನ ಅಭಿವೃದ್ಧಿ ಇಲಾಖೆ,

ಗೆ:
ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,
ಜಲಾನಯನ ಅಭಿವೃದ್ಧಿ ಇಲಾಖೆ,
................................................ ಜಿಲ್ಲೆ.
ಪ್ರತಿಯನ್ನು ಎಲ್ಲಾ ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ,
................................................ ಜಿಲ್ಲೆ ರವರಿಗೆ ಕಳುಹಿಸುತ್ತಾ ಸೂಕ್ತಕ್ರಮಕ್ಕೆ ಸೂಚಿಸಿದೆ.